# ವಿಲನ್ ನೋಡುವ ದೃಷ್ಟಿ ಬದಲಾಗಿದೆ

**ಸುಷ್ಮಿತ್ ಜೈನ್**
ಝೀ ಪವರ್
'ಗೌರಿ'ಯ ಪ್ರೀತಂ

■ ರಾಘವೇಂದ್ರ ಕೆ.

◆ **ಅಭಿನಯವನ್ನು ಆಯ್ಕೆ ಮಾಡಿಕೊಂಡಿದ್ದು ಹೇಗೆ?**

ತೀರ ಆಸಕ್ತಿಯೇನೂ ಇರಲಿಲ್ಲ. ಓದುವಾಗ ಸಣ್ಣಪುಟ್ಟ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಅದರಲ್ಲಿ ಸಿಕ್ಕ ಪ್ರೋತ್ಸಾಹ ಅಭಿನಯದತ್ತ ಆಕರ್ಷಣೆ ಹುಟ್ಟಿಸಿತು. ಒಳ್ಳೆಯ ಬಾಡಿ ಮತ್ತೆ ಲುಕ್ಸ್ ಇದ್ದರೆ ಅವಕಾಶ ಸಿಗುತ್ತದೆ ಎಂದುಕೊಂಡಿದ್ದೆ. ತಪ್ಪು ತಿಳಿದುಕೊಂಡಿದ್ದೇನೆ ಎನ್ನುವುದು ಆಮೇಲೆ ಗೊತ್ತಾಯಿತು. ಅಭಿನಯವನ್ನು ಕಲಿತವರೇ ಸಾಕಷ್ಟು ಮಂದಿ ಅವಕಾಶಕ್ಕಾಗಿ ಕಷ್ಟಪಡುತ್ತಿದ್ದಾರೆ ಎನ್ನುವುದೂ ತಿಳಿಯಿತು. ನಟನೆಯಲ್ಲಿ ಡಿಪ್ಲೊಮಾ ಮಾಡಿದೆ. ಅವಕಾಶ ಸಿಕ್ಕ ಮೇಲೆ ನಟನೆಯ ಮೋಹ ಹೆಚ್ಚಾಯಿತು. ಸ್ಟಾರ್ ಸುವರ್ಣದ 'ಸತ್ಯಂ ಶಿವಂ ಸುಂದರಂ' ಮೊದಲ ಅವಕಾಶ. ಎಂಟು ವರ್ಷದಿಂದ ಅಭಿನಯವನ್ನೇ ಮಾಡುತ್ತಿದ್ದೇನೆ. ಇದು ಏಳನೇ ಧಾರಾವಾಹಿ.

◆ **ಬಾಲ್ಯದಲ್ಲಿ ಬಣ್ಣ ಹಚ್ಚಿದ ನೆನಪುಗಳು ಇವೆಯೇ?**

ಮೂಲತಃ ಮೈಸೂರಿನವನು. ಅಮ್ಮ ಮೂಡುಬಿದರೆಯವರು. ಅಲ್ಲೇ ಹುಟ್ಟಿದ್ದು, ಬೆಳೆದಿದ್ದು ಓದಿದ್ದೆಲ್ಲ ಮೈಸೂರು. ಡಿಪ್ಲೊಮಾ ಮೈಕಾನಿಕಲ್‌ಗೆ ಸೇರಿದೆ. ಆಗಲೇ ಓದಿನಲ್ಲಿ ಆಸಕ್ತಿ ಇಲ್ಲ ಎನ್ನುವುದು ಗೊತ್ತಾಯಿತು. ಏನು ಮಾಡುವುದು ಎಂದು ಯೋಚನೆ ಮಾಡಿದಾಗ ಕಂಡ ದಾರಿ ಇದೊಂದೆ. ನನ್ನ ಅಜ್ಜಿ ಮೊದಲು ಮೇಕಪ್ ಮಾಡಿದ್ದರು. ಅದೂ ನಮ್ಮ ಮನೆ ದೇವಸ್ಥಾನದ ಬಳಿ ಪುಟ್ಟ ಕಾರ್ಯಕ್ರಮ. ಅವತ್ತು ಏನೋ ಒಂದು ಮಾಡಿದೆ. ಅದು ಶಾಲೆ–ಕಾಲೇಜುಗಳಲ್ಲಿ ಮುಂದುವರಿಯಿತು. ಶಾಲೆಯಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಹೆಚ್ಚಿತ್ತು. ಕ್ರಮೇಣ ಅದೂ ಕಡಿಮೆ ಆಯಿತು.

◆ **ಇಷ್ಟದ ಪಾತ್ರದ ಸ್ವಭಾವ ಹೇಗಿದ್ದರೆ ಚಂದ ಅನ್ನಿಸುತ್ತದೆ?**

ವಿಲನ್ ಪಾತ್ರ ಮಾಡಬೇಕು. ಅದೂ ರಘುವರನ್ ರೀತಿಯಲ್ಲಿ ಕಾಣಿಸಿಕೊಳ್ಳಬೇಕು. ಹೀರೊ ಆಗಿ ಸೈ ಅನ್ನಿಸಿಕೊಂಡರೂ ವಿಲನ್ ಆಗಿ ಸೈ ಅನ್ನಿಸಿಕೊಳ್ಳುವುದು ತುಂಬ ಕಷ್ಟ. ಈಗ ಟ್ರೆಂಡ್ ಬದಲಾಗಿದೆ. ಖಳನಟರ ಅಭಿನಯವನ್ನೂ ಇಷ್ಟಪಡುವ ಅಭಿಮಾನಿಗಳು ಇದ್ದಾರೆ. ನನ್ನ ಚಹರೆ ಅಂತಹ ಪಾತ್ರಕ್ಕೆ ಸೂಕ್ತ ಆಗಲ್ಲ ಎನ್ನುವ ಮಾತುಗಳನ್ನು ಕೇಳಿದ್ದೇನೆ. ಆದರೂ ಒಂದು ಪ್ರಯತ್ನ ಮಾಡಬೇಕು ಎನ್ನುವ ಅಭಿಲಾಷೆ ಇದೆ. 'ಮನಸ್ಸೆಲ್ಲಾ ನೀನೇ' ಎನ್ನುವ ಧಾರಾವಾಹಿಯಲ್ಲಿ ವಿಲನ್ ಆಗಿದ್ದೆ. ಬೆಳ್ಳಿತೆರೆಯಲ್ಲೂ ಅಂತಹ ಪಾತ್ರ ಮಾಡಬೇಕಿದೆ. ಯಾವುದೇ ಪಾತ್ರವಾದರೂ ಮಾಡಬಲ್ಲೆ ಎನ್ನುವುದನ್ನು ಸಾಧಿಸಿ ತೋರಿಸಬೇಕಿದೆ. ವೈಯಕ್ತಿಕವಾಗಿ ಇಂತಹದ್ದೇ ಆಗಬೇಕು. ಇದನ್ನೇ ಮಾಡುತ್ತೇನೆ ಎಂದು ನಿರೀಕ್ಷೆ ಮಾಡುವುದಿಲ್ಲ. ಈವರೆಗೆ ಒಂದರಂತೆ ಮತ್ತೊಂದು ಪಾತ್ರ ಮಾಡಿಲ್ಲ.

◆ **ಇಂದಿನ ಸಿನಿಮಾರಂಗದ ಬಗ್ಗೆ ಏನೆನಿಸುತ್ತದೆ?**

ಸಿನಿಮಾ ಪ್ರವೇಶ ಮಾಡಿದ ಒಬ್ಬ ಕಲಾವಿದ ತಕ್ಷಣ ಸ್ಟಾರ್ ನಟರನ್ನೇ ಕಾಣುತ್ತಾನೆ. ಅವರಂತೆ ತಾನೂ ಆಗಬೇಕು ಎಂದು ಕನಸು ಕಟ್ಟಿಕೊಳ್ಳುತ್ತಾನೆ. ಯಶಸ್ವಿ ನಟರೂ ಪ್ರಯಾಸದಿಂದಲೇ ಸಾಗಿ ಬಂದಿರುತ್ತಾರೆ. ಯಾರಿಗೂ ಯಶಸ್ಸು ದಿಢೀರೆಂದು ಬಂದಿರುವುದಿಲ್ಲ. ಅದನ್ನು ಬಹುತೇಕರು ಅರ್ಥ ಮಾಡಿಕೊಳ್ಳುವುದಿಲ್ಲ. ಮೊದಲು ಚಿಕ್ಕ ಪಾತ್ರವೇ ಆದರೂ ಕಾಣಿಸಿಕೊಳ್ಳಬೇಕು. ಆಮೂಲಕ ಪರಿಚಯ ಆಗಬೇಕು. ಸಿನಿಮಾ ಮಾಡುತ್ತೇನೆ ಅಂದರೆ, ಸಿನಿಮಾದಲ್ಲಿ ಮಾಡಿದ್ದ ಅನುಭವವನ್ನು ಇಂಡಸ್ಟ್ರಿ ನಿರೀಕ್ಷೆ ಮಾಡುತ್ತದೆ. ರಾತ್ರೋ ರಾತ್ರಿ ಯಾರೂ ಸೂಪರ್ ಸ್ಟಾರ್ ಆಗುವುದಿಲ್ಲ. ಕಷ್ಟಪಟ್ಟು ಬಂದಾಗಲೇ ಯಶಸ್ಸು ಸಾಧ್ಯ. ಕಲಾವಿದನ ನಟನೆಯನ್ನು ನೋಡಿಯೇ ನಿರ್ದೇಶಕರು ಯಾವ ಪಾತ್ರಕ್ಕೆ ಯಾರು ಸೂಕ್ತ ಎಂದು ನಿರ್ಧರಿಸುತ್ತಾರೆ. ಒಂದು ಹಂತಕ್ಕೆ ಬೆಳೆದ ನಂತರವೇ ನಮ್ಮ ಇಷ್ಟದ ಸಿನಿಮಾವನ್ನು ಮಾಡಲು ಸಾಧ್ಯ. ಹಾಗಾಗಿ ಸಿಕ್ಕ ಅವಕಾಶವನ್ನು ಚೆನ್ನಾಗಿ ಬಳಸಿಕೊಳ್ಳಬೇಕು.

◆ **ಪಾತ್ರದ ಆಳವನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ?**

ದೊಡ್ಡ ತಯಾರಿ ಏನನ್ನೂ ಮಾಡಿಕೊಳ್ಳುವುದಿಲ್ಲ. ನಮ್ಮ ಸುತ್ತಲ ಪರಿಸರವನ್ನೇ ಸೂಕ್ಷ್ಮವಾಗಿ ನೋಡುತ್ತೇನೆ. ಸ್ನೇಹಿತರು ಸಂಬಂಧಿಗಳ ಸ್ವಭಾವವನ್ನು ಅರ್ಥಮಾಡಿಕೊಳ್ಳುತ್ತೇನೆ. ನಟರಿಗೆ ಸೂಕ್ಷ್ಮ ಕಣ್ಣಿರಬೇಕು. ಸುತ್ತಲಿನ ವಾತಾವರಣವನ್ನು ಚೆನ್ನಾಗಿ ಗ್ರಹಿಸಬೇಕು. ಯಾವುದಾದರೂ ಒಂದು ಪಾತ್ರ ಬಂದಾಗ ಅದನ್ನು ಪ್ರತಿನಿಧಿಸುವ ವ್ಯಕ್ತಿಗಳು ನಮ್ಮ ಸುತ್ತಮುತ್ತಲಿನಲ್ಲೇ ಇರುತ್ತಾರೆ. ಅದನ್ನು ಮನಗಂಡು ಸುಷ್ಮಿತ್ ಏನು ಮಾಡಲು ಸಾಧ್ಯ ಎಂದು ಯೋಚಿಸುತ್ತೇನೆ. ಅದರ ಆಧಾರದ ಮೇಲೆ ಶೈಲಿಯಲ್ಲಿ ಅದನ್ನು ಅನಾವರಣ ಮಾಡಿಕೊಳ್ಳಲು ಬಯಸುವೆ.

◆ **ಬಣ್ಣದ ಲೋಕದ ಅನುಭವವನ್ನು ಹೇಳುವುದಾದರೆ.**

ಈ ಕ್ಷೇತ್ರದಲ್ಲಿ ಬದುಕುವುದಕ್ಕೆ ತೊಂದರೆ ಇಲ್ಲ. ಆರ್ಥಿಕವಾಗಿ ಬೆಳೆಯಲು ಸಾಕಷ್ಟು ಸಮಯ ಬೇಕಾಗುತ್ತದೆ. ಆಸ್ತಿ ಮಾಡುವೆ ಎನ್ನುವುದು ಭ್ರಮೆ. ಬೇರೆಯವರನ್ನು ನೋಡಿ ನಾವು ಕನಸು ಕಾಣಲು ಸಾಧ್ಯ ಇಲ್ಲ. ದುಡ್ಡಿಗಿಂತ ಹೆಸರು ಮಾಡುವುದು ಮೊದಲ ಆದ್ಯತೆ ಆಗಬೇಕು ಎಂದು ಅರ್ಥಮಾಡಿಕೊಂಡಿದ್ದೇನೆ. ಕಲಾವಿದರಿಗೆ ತುಂಬ ಅನಿಶ್ಚಿತ ಬದುಕು ಇರುತ್ತದೆ. ಕೆಲವೊಮ್ಮೆ ಕೆಲಸವೇ ಇರುವುದಿಲ್ಲ. ನಿಗದಿತ ಆದಾಯ ಇರುವುದಿಲ್ಲ. ಬರುವ ಆದಾಯದಲ್ಲಿಯೇ ಉಳಿತಾಯ ಮಾಡಿಕೊಳ್ಳಬೇಕು. ಅನಗತ್ಯವಾಗಿ ಕಷ್ಟಕ್ಕೆ ಸಿಲುಕಿ ಬೀಳಬಾರದು ಎಂದು ಅನ್ನಿಸುತ್ತದೆ. ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು.

◆ **'ಗೌರಿ'ಯ ನಿಮ್ಮ ಪಾತ್ರ ಹೇಗಿದೆ?**

ಚಾನಲ್‌ನವರೇ ಪ್ರೀತಂ ಪಾತ್ರಕ್ಕೆ ಆಯ್ಕೆ ಮಾಡಿದ್ದಾರೆ. 'ಅಣ್ಣಯ್ಯ'ದಲ್ಲಿ ಮಂಡ್ಯ ಪ್ರಾಂತ್ಯದ ಹಳ್ಳಿ ಹುಡುಗ. ಇಲ್ಲಿ ನಗರದ ಹುಡುಗನ ಪಾತ್ರ. ದೇಹ–ಭಾಷೆ ಸಂಪೂರ್ಣ ಬೇರೆಯದೇ ರೀತಿಯಲ್ಲಿದೆ. ಲವರ್ ಬಾಯ್ ಪಾತ್ರ. ಪ್ರೀತಂ ಒಳ್ಳೆಯ ಹುಡುಗ ಎನ್ನುವ ಅಭಿಪ್ರಾಯ ಸಿಕ್ಕಿದೆ. ಅದು ನನಗೆ ಎಷ್ಟು ಸೂಕ್ತ ಆಗುತ್ತದೆ ಎನ್ನುವುದಕ್ಕಿಂತ ಸಿಕ್ಕ ಪಾತ್ರವನ್ನು ಚೆನ್ನಾಗಿ ಹೊಂದಿಸಿಕೊಳ್ಳುವುದೇ ಕಲೆ. ■

